ಮೈಸೂರ ಗೆಜೆಟ್ಟ

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಶನಿವಾರ, ನವಂಬರ್ ತಾ॥ 22, ಸ್ಯ 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ-ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಜೀಫ್ ಜಡ್ಜ್ರೀರುವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಿನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡಿ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ್ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ್ ಡಿಬೆಂಚರ್‌ಗಳನ್ನು ಎಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡಿರ್ಸ,
ಕಾಂಪ್ಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್‌ಜಡ್ಜ್ರೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 273.

ಮೃತಪಟ್ಟ ಲೇಟ್ ಸೆರ್ಷ ಕೋರ್ಟು ಡಿಫ್ಟಿ ಮುನಷಿ ಬಿಂಡಿಗನವಿಲೆ ಗರುಡಾಚಾರ್ಯರ ಆಸ್ತಿ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಶಿದ್ದೀಕಟ್ಟೆಲಿ ಯಿರುವ ಪೆರ್ಷ ಅ॥ ಕ್ರಿ॥ ಮೆ॥ ಕೃಷ್ಣಸ್ವಾಮಯ್ಯಂಗಾರ್ರ ಮಗಳು ಗರುಡಮ್ಮ ಮೃತಪಟ್ಟ ಸದರೀ ಗರುಡಾಚಾರ್ಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಶಿದ್ದೀಕಟ್ಟೆ ಸ್ಥಳದ ಸದರೀ ಗರುಡಮ್ಮನವರು ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಗರುಡಾಚಾರ್ಯರ ಹಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗರುಡವ್ಯನವರ ಅರ್ಜೀಯನ್ನು 1884ನೇ ಇಸವಿ ಡಿಸೆಂಬರ್ ತಿಂಗಳು ತಾರೀಖು 11ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗರುಡಾಚಾರ್ಯರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ನವೆಂಬರ್ ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಕೈಸ್,
ಸಬ್ ಜಡ್ಜ.

ಸೆಂಟ್ರಲ್ ಜೈಲ್.

ಇಸ್ತಿಹಾರ್‌ನಾಮಾ.

ತಾರೀಖು 4ನೇ ನವೆಂಬರ್ 1884.

ಇದರಿಂದ ಪ್ರಕಟಿಸಲ್ಪಡುವದೇನಂದರೆ,—ಬೆಂಗಳೂರು ಸೆಂಟ್ರಲ್ ಜೈಲ್‌ನಲ್ಲಿಯೂ, ಡಿಸ್ಟ್ರಿಕ್ಟು ಲಾಕಪ್ಪಿನಲ್ಲಿಯೂ, ಖೈದು ಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಯೆ ಬೇಕಾದ ಆಹಾರ ಪದಾರ್ಥಗಳು ವಗೈರೇ ದರೋಬಸ್ತು ಜಿನಸಿಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಕೊಡಲ್ಪಡುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಸ॥ 1884ನೇ ಇಸವಿ ಡಿಸೆಂಬರ್ 1ನೇ ತಾರೀಖಿನ ವರಿಗೆ ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರವರು ತೆಗದುಕೊಳ್ಳುವರು.

2. ಮೇಲೆ ಕಂಡ ತಾರೀಖಿಗೆ ತರುವಾಯ ದರಖಾಸ್ತುಗಳು ಯಾವತ್ತೂ ತೆಗದುಕೊಳ್ಳಲ್ಪಡಲಾರವು.

3. ದರಖಾಸ್ತುಗಳ ಮೇಲೆ "ಸೆಂಟ್ರಲ್ ಜೈಲಿಗೂ; ಡಿಸ್ಟ್ರಿಕ್ಟು ಲಾಕಪ್ಪಿಗೂ ಜಿನಸೀಗಳ ಸರಬರಾಯಿ ಬಗ್ಯೆ ದರಖಾಸ್ತುಗಳು" ಯಂಬದಾಗಿ ವಿಳಾಸೆ ಬರೆಯಲ್ಪಡತಕ್ಕದ್ದು.

4. ನಗದಾಗಿಯಾಗಲಿ ಕರೆನ್ಸಿ ನೋಟುಗಳ ಮೂಲಕವಾಗಿಯಾಗಲಿ 500 ರೂಪಾಯಿಗಳ ಡಿಪಾಜಿಟ್ ದೇಖೀಲ್ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರವರಿಂದ ಅವರ ಆಫೀಸಿನಲ್ಲಿ ಮೇಲೆ ಕಂಡ ತಾರೀಖಿನೊಳಗೆ ಅಲ್ಲಿಗೆ ಬರುವದಕ್ಕೆ ಖಾಯಿಷ್ ಮಾಡುವ ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ ಈಕೆಳಗೆ ಬರುವ ವಳ್ಳಿಗರಹಾದ ಜಿನಸೀಗಳನ್ನು ರೂಪಾಯಿ 1ಕ್ಕೆ ಪೌಂಡ್ ತೂಕದ ಪ್ರಕಾರ ಸರಬರಾಯಿ ಮಾಡತಕ್ಕ ದರವನ್ನು ನಮೂದಿಸತಕ್ಕದ್ದು.

ಅಕ್ಕಿ	ಹಶೇ ಅಕ್ಕಿ ವ ಕುದಪಲ ಅಕ್ಕಿ	...	ತರಕಾರಿ
ರಾಗಿ	.. ..	..	ಹುರಳಿ
ಬೇಳೆ	.. ..	..	ರವೆ
ಅವರೆ	.. ..	..	ಸಕ್ಕರೆ
ಮೊಂಸ	.. ..	..	ಕಾಫಿ
ಮೊಸರು	.. ..	..	ತೇ ಯಲೆ
ಯಳ್ಳೆಂಣೆ	.. ..	..	ರೊಟ್ಟಿ
ತುಪ್ಪ	.. ..	..	ಹಾಲು
ಹುಣಸೇಹಣ್ಣು	.. ..	..	ಶೀಗೆಕಾಯಿ
ಉಪ್ಪು	.. ..	..	ಸಬ್ಬಸ್ಸಿ
ಮಸಾಲೆ ಪುಡಿ	.. ..	..	ಗೇರುಬೀಜ
ಈರುಳ್ಳಿ	.. ..	..	ಮೆಣಸು
ಬೆಳ್ಳುಳ್ಳಿ	.. ..	..	ಉಣಗಿದ ಸಾಬೆ

7. ದರಖಾಸ್ತು ಪಟ್ಟಿಯಲ್ಲಿ ಮೇಲೆನಮೂದಿಸಿದ ಪದಾರ್ಥಗಳಿಗೆ ಮಾತ್ರವಲ್ಲದೆ ದೀಪದ ಯಂತೆ, ಕೆರೋಜಿನ್ ಯಂತೆ, ಮಂಣಿನ ಹರಿವಾಣಗಳು, ಲೋಟುಗಳು, ಪರಿಕೆ ವಗೈರೇ ಪದಾರ್ಥಗಳಿಗೂ ದರಗಳು ನಮೂದಿಸಬೇಕು. ಕಂಟ್ರಾಕ್ಟುದಾರನು ಖೈದಿಗಳಿಂದ ಬೀಸಲ್ಪಡುವ ಬಗ್ಯೆ ರಾಗಿಯನ್ನು ಸರಬರಾಯಿ ಮಾಡತಕ್ಕದ್ದು. ಮತ್ತು ಹಿಟ್ಟಾಗಿ ಕೊಡಲ್ಪಡುವದು, ರಾಗಿ ಧಾರಣೆ ಪ್ರಕಾರ ಸರಬರಾಯಿ ಮಾಡಿದ್ದನ್ನು ಹಾಗೆ ಕೊಡಲ್ಪಟ್ಟ ಪರಿಮಾಣದ ಮೇಲೆ ಲೆಕ್ಕ ಮಾಡಿ ಅದರಂತೆ ಮೊಬಲಗು ಪಾವತೀ ಮಾಡಲ್ಪಡುತ್ತೆ.

8. (ನಾನಾ ಸ್ಕೇಲ್‌ಗಳ ಮೇಲೆ ಯಿರುವ ರೋಜಿನಾ 750 ಮಂದಿ ಖೈದಿಗಳಿಗಾಗಿ) ಈ ಸಂವತ್ಸರಕ್ಕೆ ಬೇಕಾಗಬಹುದಾದ ಮುಖ್ಯ ಪದಾರ್ಥಗಳ ಅಂದಾಜಾ ಇದರಡೀ ಕಂಡಂತೆ ಯಿರತಕ್ಕದ್ದು.